## ಒಟ್ಟೂರ್ ಬಾಲಭಟ್ಟರಿಂದ ರಚಿತವಾದ 'ಶ್ರೀರಾಮಕೃಷ್ಣ ಕರ್ಣಾಮೃತಮ್'

ದಾನೇನ ತೀರ್ಥಗಮನೇನ ಸುರಾರ್ಚನೇನ
ಶ್ರಾದ್ಧೇನ ವೇದಪಠನೇನ ಚ ತಸ್ಯ ಕಿಂ ಸ್ಯಾತ್ ।
ಯೋ ರಾಮಕೃಷ್ಣ ಚರಣೇ ರಮತೇ ಸದಾऽಪಿ
ಸರ್ವಂ ತಪಃ ಪರಿಸಮಾಪ್ಯತ ಏವ ಭಕ್ತೌ ॥

ದಾನದಿಂದಾಗಲಿ, ತೀರ್ಥಯಾತ್ರೆಯಿಂದಾಗಲಿ, ದೇವರ ಪೂಜೆಯಿಂದಾಗಲಿ, ಶ್ರಾದ್ಧದಿಂದಾಗಲಿ, ವೇದಪಠನದಿಂದಾಗಲಿ ಏನಾದೀತು? ಯಾರು ಶ್ರೀರಾಮಕೃಷ್ಣರ ಚರಣದಲ್ಲಿ ಸದಾ ರಮಿಸುತ್ತಾನೆಯೊ ಅವನ ಎಲ್ಲ ತಪಸ್ಸೂ ಭಕ್ತಿಯಲ್ಲಿ ಕೊನೆಗೊಳ್ಳುತ್ತದೆ.

ಕಾಮಾದಿದುರ್ಗುಣಚಿರಂತನಸೇವನೇನ
ದುರ್ವಾಸಿತಂ ಮಲಿನಗಂಧಮಯಂ ಮನೋ ಮೇ ।
ತ್ವತ್ಪಾದಪಂಕಜನಿರಂತರಚಿಂತನೇನ
ಸಂಶೋಧ್ಯ ತೇ ಕರುಣಯಾ ಸುರಭೀಕರಿಷ್ಯೇ ॥

ಕಾಮವೇ ಮೊದಲಾದ ದುರ್ಗುಣಗಳನ್ನು ಬಹುಕಾಲ ಸೇವಿಸಿದ್ದರಿಂದ ನನ್ನ ಮನಸ್ಸು ಕಲುಷಿತವಾಗಿ ದುರ್ವಾಸನೆಯಿಂದ ಕೂಡಿದೆ. ನಿನ್ನ ಪಾದಕಮಲಗಳನ್ನು ಎಡೆಬಿಡದೆ ಚಿಂತಿಸಿ, ನಿನ್ನ ಕರುಣೆಯಿಂದ ಅದನ್ನು ಶುದ್ಧವಾಗಿಸಿ ಸುಗಂಧಯುಕ್ತವನ್ನಾಗಿ ಮಾಡುತ್ತೇನೆ.

ಆರೋಗ್ಯಂ ದಿಶ ಮೇ ಸ್ವಧರ್ಮಚರಣಂ ಯೇನೈವ ನಿರ್ವರ್ತ್ಯತೇ
ವೈರಾಗ್ಯಂ ವಿತರ ಪ್ರಸೀದತಿ ಮನೋ ಯೇನೈವ ನಿಶ್ಶೇಷತಃ ।
ಜ್ಞಾನಂ ಯಚ್ಛ ಸಮಸ್ತ ಸಂಸೃತಿಭಯಂ ಯೇನೈವ ನಿರ್ಧೂಯತೇ
ಭಕ್ತಿಂ ದೇಹಿ ವಿಲಕ್ಷಣಾರ್ಚನಸುಖಂ ಯೇನೈವ ಸಂಸಿದ್ಧ್ಯತಿ ॥

ನನಗೆ ಆರೋಗ್ಯವನ್ನು ಕೊಡು; ಏಕೆಂದರೆ ಅದರಿಂದಲೇ ಸ್ವಧರ್ಮಾಚರಣೆಯು ಸಾಧ್ಯ. ನನಗೆ ವೈರಾಗ್ಯವನ್ನು ದಯಪಾಲಿಸು; ಏಕೆಂದರೆ ಅದರಿಂದಲೇ ಮನಸ್ಸು ಸಂಪೂರ್ಣವಾಗಿ ಪ್ರಸನ್ನವಾಗುತ್ತದೆ. ನನಗೆ ಜ್ಞಾನವನ್ನುಂಟುಮಾಡು; ಏಕೆಂದರೆ ಅದರಿಂದಲೇ ಸಕಲ ಸಂಸಾರಭಯವೂ ಹೋಗಿಬಿಡುತ್ತದೆ. ನನಗೆ ಭಕ್ತಿಯನ್ನು ನೀಡು; ಏಕೆಂದರೆ ಅದರಿಂದಲೇ ವಿಶೇಷವಾಗಿ ದೇವತಾರ್ಚನ ಸುಖವು ಸಿದ್ಧಿಸುವುದು.



## ಸರಳತೆ

**ಮಗುವಿನಷ್ಟು ಸರಳವಾಗುವ ತನಕ ಪರಮಾತ್ಮ ಲಭಿಸುವುದಿಲ್ಲ. ನೀನು ಗಳಿಸಿದ ಪ್ರಾಪಂಚಿಕ ಜ್ಞಾನವನ್ನೆಲ್ಲ ಮರೆತು ಮಗುವಿನಂತೆ ಆಗು. ಆಗ ನಿನಗೆ ಸತ್ಯ ಲಭಿಸುವುದು.**

**ಸರಳತೆ ಒಬ್ಬನನ್ನು ಸುಲಭವಾಗಿ ದೇವರ ಸಮೀಪಕ್ಕೆ ಒಯ್ಯುವುದು. ಮನುಷ್ಯನು ಸರಳಸ್ವಭಾವದವನಾಗಿದ್ದರೆ ಆಧ್ಯಾತ್ಮಿಕ ಬೋಧನೆ ಸುಲಭವಾಗಿ ಅವನಲ್ಲಿ ಫಲಕಾರಿಯಾಗುವುದು. ಇದು ಕಲ್ಲುಗಳು ಇಲ್ಲದೆ ಚೆನ್ನಾಗಿ ಉತ್ತಿದ ನೆಲದಲ್ಲಿ ಬಿತ್ತಿದ ಬೀಜ ಬೇಗ ಮೊಳೆತು ಫಲಕ್ಕೆ ಬರುವಂತೆ.**

**ಜನರು ಬಹಳ ತಪಸ್ಸಿನ ಪರಿಣಾಮವಾಗಿ ಧಾರಾಳಿಗಳು ಮತ್ತು ಸರಳರೂ ಆಗುತ್ತಾರೆ. ಸರಳವಾದ ಮನಸ್ಸಿಲ್ಲದೆ ದೇವರನ್ನು ಪಡೆಯಲಾಗುವುದಿಲ್ಲ. ಸರಳಸ್ವಭಾವದವರಿಗೆ ಮಾತ್ರ ಅವನು ತನ್ನ ಮಹಿಮೆಯನ್ನು ತೋರುವನು.**

**ನೀನು ದೇವರ ಭಕ್ತನಾಗಿರಬೇಕು. ಆದರೆ ಅದಕ್ಕಾಗಿ ಮೂಢನಾಗಬೇಡ. ಯಾವಾಗಲೂ ನಿನ್ನ ಮನಸ್ಸಿನಲ್ಲಿ ಸತ್ಯ ಯಾವುದು, ಮಿಥ್ಯ ಯಾವುದು, ಶಾಶ್ವತವಾವುದು, ಅಶಾಶ್ವತವಾವುದು ಎಂದು ಆಲೋಚಿಸಿ ಅಶಾಶ್ವತವಾದುದನ್ನು ತೊರೆದು ಶಾಶ್ವತವಾದ ವಸ್ತುವಿನ ಮೇಲೆ ಮಾತ್ರ ಮನಸ್ಸನ್ನು ಇಡಬೇಕು. –ಶ್ರೀರಾಮಕೃಷ್ಣ**

NO CRACK, NO LEAK BUILDINGS

**Ph : 93423 84641**
**0821-2545259**

Architect Services
Building Plans &
Construction,
Supervision,
Investment on sites at
Bangalore, Mysore
and Coorg.



*Contact for - package of Buildings - 18 lakhs, 28 lakhs, 48 lakhs and above in 30 x 40, 40 x 60, 50 x 80 and 20 x 30 sites - including site value*

SAVE BROKERAGE AND OTHER HASTLES

## SIDDHARTHA & ASSOCIATES

Architects & Engineers, 1/A, Kamakshi Hospital Road,
Opp. IBP Petrol Bunk, K.G.Koppal, Mysore.

## ಪೂರ್ಣಪ್ರಮತಿ (ಪರಿಪೂರ್ಣ ಕಲಿಕೆಯ ಶಿಕ್ಷಣ ಕೇಂದ್ರ)

ಗಿರಿನಗರ, ಬೆಂಗಳೂರು

## ಪ್ರವೇಶಾವಕಾಶ (2011–12)

**ICSE** ಚೌಕಟ್ಟಿನ ಆಂಗ್ಲ ಮಾಧ್ಯಮದ ಆಧುನಿಕ ಶಿಕ್ಷಣದ ಜೊತೆಗೆ ಬೆಸೆದ ಸಂಸ್ಕೃತ, ಭಾರತೀಯ ಸಂಗೀತ, ನೃತ್ಯ, ಸಂಸ್ಕೃತಿ, ಇತಿಹಾಸ, ದರ್ಶನ ಹಾಗೂ ಪರಂಪರೆಯ ಶಿಕ್ಷಣ


ಮಾಂಟೆಸರಿ, **LKG, UKG** ಹಾಗೂ **1** ರಿಂದ **4** ನೇ ತರಗತಿಯವರೆಗೆ ಮಾತ್ರ ಪ್ರವೇಶ ಲಭ್ಯ.

ಆಸಕ್ತರು ಸಂಪರ್ಕಿಸಿ: **Purnapramiti, 989, Ist E Main Road, Girinagar, Bangalore – 560 085**

**Website : www.purnapramiti.in ; e-mail:info@purnapramiti.in**

ಸಂಪಾದಕೀಯ

# ರಾಮ, ಕೃಷ್ಣ – ರಾಮಕೃಷ್ಣ



## ರಾಮ–ಕೃಷ್ಣ

ಶ್ರೀರಾಮ ಮತ್ತು ಶ್ರೀಕೃಷ್ಣರ ವ್ಯಕ್ತಿತ್ವಗಳು ನಮ್ಮ ಭಾರತೀಯ ಸಂಸ್ಕೃತಿಪುರುಷನ ಎರಡು ಕಣ್ಣುಗಳಿದ್ದಂತೆ. ಹಿಂದೂ ಸಭ್ಯತೆಯ ಸಮಗ್ರ ಒಳನೋಟ ಈ ಇಬ್ಬರು ಅವತಾರಪುರುಷರ ಯಶೋಗಾಥೆಯಲ್ಲಿ ಕಾಣಸಿಗುತ್ತದೆ. ಇವರಿಬ್ಬರೂ ಮಾನವಜೀವಿತದ ಪರಮಾದರ್ಶವನ್ನು ತಮ್ಮ ವ್ಯಕ್ತಿತ್ವ ಮತ್ತು ನಡವಳಿಕೆಗಳಲ್ಲಿ ಪ್ರಕಟಗೊಳಿಸುತ್ತಾರೆ. ಮಾನವನು ಸಾಧಿಸಬಹುದಾದ, ಏರಬಹುದಾದ ನೈತಿಕ ಮತ್ತು ಆಧ್ಯಾತ್ಮಿಕ ಶಿಖರವನ್ನು ಅವರಿಬ್ಬರೂ ಪ್ರತಿನಿಧಿಸುತ್ತಾರೆ. ಶ್ರೀರಾಮನ ಜೀವನ ಧ್ಯೇಯಕೇಂದ್ರಿತವಾಗಿದ್ದು, ಆದರ್ಶನಿಷ್ಠವಾಗಿದೆ. ಶ್ರೀಕೃಷ್ಣನ ಜೀವನವಾದರೋ ಅನೇಕ ಸಂಕೀರ್ಣತೆಗಳಿಂದ ಕೂಡಿದ್ದು, ಅವುಗಳ ಮಧ್ಯದಲ್ಲಿಯೇ ನಿರಾಸಕ್ತ ಕರ್ಮವನ್ನು ಮಾಡುವ ವಾಸ್ತವ ದೃಷ್ಟಿಯುಳ್ಳದ್ದಾಗಿದೆ. ಇವರಿಬ್ಬರು ನಡೆದುಕೊಂಡ ರೀತಿಯಲ್ಲಿ ವೈಪರೀತ್ಯಗಳು ಮತ್ತು ವಿರೋಧಾಭಾಸಗಳು ಇರುವಂತೆ ಅನ್ನಿಸಿದರೂ, ಅವರಿಬ್ಬರೂ ಆಧ್ಯಾತ್ಮಿಕ ಆದರ್ಶದ ಎರಡು ಮುಖಗಳನ್ನು ಸಂಕೇತಿಸುತ್ತಾರೆ ಎಂದು ಧಾರಾಳವಾಗಿ ಹೇಳಬಹುದು. ಶ್ರೀರಾಮಚಂದ್ರನು ನೈತಿಕತೆಯ ಅಪರಾವತಾರನಾದರೆ, ಶ್ರೀಕೃಷ್ಣಚಂದ್ರನು ನಿರಾಸಕ್ತಿ ಮತ್ತು ಸಮಷ್ಟಿ ಹಿತವನ್ನೇ ಉದ್ದೇಶವಾಗಿ ಉಳ್ಳ ಕರ್ಮಯೋಗದ ಸಾಕಾರರೂಪ. ಪರಿಪೂರ್ಣ ನೈತಿಕತೆ ಶ್ರೀರಾಮನ ವೈಶಿಷ್ಟ್ಯವಾದರೆ, ಪ್ರಚಂಡ ಕ್ರಿಯಾತ್ಮಕತೆ, ಅಸೀಮ ನಿರಾಸಕ್ತಿ, ಸಾಮಾಜಿಕ ಹಿತಚಿಂತನೆ – ಇವು ಶ್ರೀಕೃಷ್ಣನ ವೈಶಿಷ್ಟ್ಯಗಳು. ಇವರಿಬ್ಬರ ಧ್ಯೇಯವೂ ಒಂದೇ. ಅದೇ ಧರ್ಮದ ಅಭ್ಯುತ್ಥಾನ, ಅಧರ್ಮದ ಮರ್ದನ. ರಾಮ ಮತ್ತು ಕೃಷ್ಣ – ಇಬ್ಬರೂ ಮಾನವನಲ್ಲಿ ಸುಪ್ತವಾಗಿ ಅಡಗಿರುವ ದಿವ್ಯತೆಯ ಪರಿಪೂರ್ಣ ಅಭಿವ್ಯಕ್ತಿಗಳಾಗಿ ಕಂಗೊಳಿಸುತ್ತಾರೆ.

## ರಾಮ ಮತ್ತು ಕೃಷ್ಣರ ಮಿಲನ

ರಾಮನ ನೈತಿಕ ಹಾಗೂ ಆಧ್ಯಾತ್ಮಿಕ ಪರಿಪೂರ್ಣತೆ, ಕೃಷ್ಣನ ಕರ್ಮಯೋಗದ ಆದರ್ಶದ ಜೊತೆಗೆ ಮಿಳಿತವಾದ ಮಹಾನ್ ಚೇತನವೊಂದು ೧೯ ನೆಯ ಶತಮಾನದಲ್ಲಿ ಒಡಮೂಡಿತು. ರಾಮನ ವ್ಯಕ್ತಿಗತ ಅಧ್ಯಾತ್ಮ ಮತ್ತು ಧರ್ಮಗಳು, ಶ್ರೀಕೃಷ್ಣನ ಸಮಷ್ಟಿಹಿತದ ಧ್ಯೇಯದೊಡನೆ ಆ ವ್ಯಕ್ತಿತ್ವದಲ್ಲಿ ಸಾಮರಸ್ಯವನ್ನು ಹೊಂದಿದವು. ಆ ಮಹಾಪುರುಷನ ಹೆಸರೂ ಈ ಎರಡೂ ಜ್ಯೋತಿಃಪುಂಜರ ನಾಮಧೇಯಗಳನ್ನು ತನ್ನಲ್ಲಿ ಒಳಗೊಂಡಿತು. ಹೀಗೆ 'ಶ್ರೀರಾಮಕೃಷ್ಣ ಪರಮಹಂಸ' ರೆಂಬ ನವಯುಗಾಚಾರ್ಯರ ಜೀವಿತದಲ್ಲಿ, ರಾಮ ಮತ್ತು ಕೃಷ್ಣರ ಆದರ್ಶ, ಧ್ಯೇಯ ಮತ್ತು ಸಾಧನೆಗಳು ಸಂಘಟಿತಗೊಂಡು ಮತ್ತೊಮ್ಮೆ ಪ್ರಕಟಗೊಂಡವು. ತ್ರೇತಾಯುಗ ಮತ್ತು ದ್ವಾಪರಯುಗಗಳು ಒಗ್ಗೂಡಿ, ಅವರು ಬದುಕಿ ಬಾಳಿದ ಅವಧಿಯನ್ನು ಸತ್ಯಯುಗವನ್ನಾಗಿ ಪರಿವರ್ತಿಸಿದವು. ರಾಮ ಮತ್ತು ಕೃಷ್ಣರೆಂಬ ಪ್ರಾಚೀನ ಅವತಾರಗಳ ದಿವ್ಯತೆ, ಭವ್ಯತೆ, ಪರಿಶುದ್ಧತೆ, ಅಪರಿಮಿತತೆ, ಅನುಕಂಪಗಳು ಈ ಯುಗದಲ್ಲಿ ಸಂಸ್ಕರಣವನ್ನೂ, ವಿನೂತನತೆಯನ್ನೂ ಹೊಂದಿ, ಶ್ರೀರಾಮಕೃಷ್ಣರ ದಿವ್ಯ ವ್ಯಕ್ತಿತ್ವದಲ್ಲಿ ಸರಳವೂ, ಚೇತೋಹಾರಿಯೂ, ಆನಂದಾತಿಶಯವೂ ಆದ ರೂಪದಲ್ಲಿ ಪ್ರಕಟಗೊಂಡವು.

## ರಾಮೋ ವಿಗ್ರಹವಾನ್ ಧರ್ಮಃ

ಶ್ರೀರಾಮನು ಧರ್ಮದ ಪ್ರತಿರೂಪ. ಪಿತೃವಾಕ್ಯವನ್ನು ಪರಿಪಾಲಿಸುವ ಸಲುವಾಗಿ ತನ್ನ ಸ್ವಂತ ಹಿತಾಸಕ್ತಿಯನ್ನು ಬಿಟ್ಟುಕೊಟ್ಟ ಮಹಾತ್ಯಾಗಿ ಅವನು. ಹಾಗೆಯೇ ತಂದೆ ಕೈಕೇಯಿಗೆ

ಕೊಟ್ಟ ಮಾತಿನ ಸತ್ಯವನ್ನು ಉಳಿಸಲು ಮುಂದಾದ ಸತ್ಯನಿಷ್ಠ ಕೂಡ. ಹಿರಿಯರಲ್ಲಿ ಗೌರವ, ಕಿರಿಯರಲ್ಲಿ ವಾತ್ಸಲ್ಯ, ದುಃಖಿಗಳಲ್ಲಿ ಅನುಕಂಪೆ, ಸರ್ವಜೀವಿಗಳಲ್ಲಿ ಪ್ರೇಮಾದರ ಮುಂತಾದ ದೈವೀಗುಣಗಳು ಅವನ ವ್ಯಕ್ತಿತ್ವದ ಅವಿಭಾಜ್ಯ ಅಂಗವಾಗಿದ್ದವು. ಎಲ್ಲಕ್ಕಿಂತ ಮುಖ್ಯವಾಗಿ ಧರ್ಮದ ಅನುಷ್ಠಾನದ ಸಲುವಾಗಿ ಸ್ವಾರ್ಥವನ್ನು ಮೀರಿಹೋಗಿದ್ದ ಮಹಾಪುರುಷ ಆತ.

ಶ್ರೀರಾಮಕೃಷ್ಣರ ಜೀವನದಲ್ಲಿಯೂ ಈ ಬಗೆಯ ಧರ್ಮಪ್ರಜ್ಞೆ ಹಾಸುಹೊಕ್ಕಾಗಿರುವುದನ್ನು ಕಾಣಬಹುದು. ಶ್ರೀರಾಮಕೃಷ್ಣರು ತಾವು ನಂಬಿದ್ದ ಧ್ಯೇಯಗಳಿಗೆ ಅನುಸಾರವಾಗಿ ತಮ್ಮ ಇಡೀ ಬಾಳನ್ನು ಬದುಕಿದರು. ಅದಕ್ಕಾಗಿ ಎಷ್ಟೇ ಕಷ್ಟಪಡಬೇಕಾಗಿದ್ದರೂ ಅವರು ಹಿಂಜರಿಯಲಿಲ್ಲ. ಬಾಲ್ಯದಲ್ಲಿಯೇ ಧನಿ ಕಾಮಾರಣಿಗೆ ಕೊಟ್ಟ ಮಾತನ್ನು ಉಳಿಸಿಕೊಂಡರು. ಬಡತನದಲ್ಲಿ ಬೇಯುತ್ತಿದ್ದರೂ, ಲೌಕಿಕ ವಿದ್ಯೆಯ ಆವಶ್ಯಕತೆ ತಮಗಿಲ್ಲವೆಂದು ತಿರಸ್ಕರಿಸಿದರು. ಇದಲ್ಲದೆ, 'ಪರಮ ಪ್ರಾಮಾಣಿಕತೆ' ಎನ್ನುವುದು ಅವರ ಜೀವನದ ಉಸಿರಾಗಿತ್ತು. ಹಾಗೆಂದೇ ಅವರು ಕೇವಲ ಮೃಣ್ಮಯಿಯಾದ ಕಾಳಿಯ ಅರ್ಚನೆಯಲ್ಲಿ ಮಾತ್ರ ಸಮಾಧಾನ ಹೊಂದಲಿಲ್ಲ. ಚಿನ್ಮಯಿಯಾದ ಕಾಳಿಗಾಗಿಯೇ ಹಂಬಲಿಸಿ ಆಕೆಯನ್ನು ದರ್ಶಿಸಿದರು. ಅವರ ಎಲ್ಲಾ ಸಾಧನೆಗಳು, ಆಚರಣೆ ಮತ್ತು ಬೋಧನೆಗಳು ಪರಿಪೂರ್ಣ ನೈತಿಕತೆ, ಪ್ರಾಮಾಣಿಕತೆಗಳ ಭದ್ರ ನೆಲಗಟ್ಟಿನ ಮೇಲೆ ನಿಂತಿದ್ದವು. ಅವರ ತ್ಯಾಗವು ನೂರಕ್ಕೆ ನೂರು ಪಟ್ಟಿನದಾಗಿತ್ತು. ಹಾಸಿಗೆಯ ಅಡಿಯಲ್ಲಿ ಇದ್ದ ಒಂದು ನಾಣ್ಯವೂ ಅವರನ್ನು ಚಡಪಡಿಸುವಂತೆ ಮಾಡಿತು. ಅವರು ಪಾಲಿಸುತ್ತಿದ್ದ ಆದರ್ಶಗಳು ಅವರ ವ್ಯಕ್ತಿತ್ವದಲ್ಲಿ ಬೇರೂರಿದ್ದವು. ಯಾವ ರೀತಿಯಿಂದಲೂ ಅದಕ್ಕಿಂತ ಬೇರೆಯಾಗಿ ಅವರು ನಡೆದುಕೊಳ್ಳಲು ಸಾಧ್ಯವೇ ಇರಲಿಲ್ಲ. ನೈತಿಕ ಮತ್ತು ಆಧ್ಯಾತ್ಮಿಕ ಆದರ್ಶಗಳು ಅವರ ಜೀವನದಲ್ಲಿ ಜೀವಂತವಾಗಿ ಪ್ರಜ್ವಲಿಸಿದವು. ಹೀಗಾಗಿ ಶ್ರೀರಾಮಕೃಷ್ಣರನ್ನೂ ನಾವು ಧರ್ಮದ ಪ್ರತಿರೂಪ ಎಂದು ಧಾರಾಳವಾಗಿ ಕರೆಯಬಹುದು.

### ಕೃಷ್ಣಂ ವಂದೇ ಜಗದ್ಗುರುಂ

ಶ್ರೀಕೃಷ್ಣನು ಅತ್ಯಂತ ವಿಶಿಷ್ಟ ವ್ಯಕ್ತಿ. ಧರ್ಮವನ್ನು ಸಾಧಾರಣ ಜನರಲ್ಲಿ ಹರಡುವುದು ಮತ್ತು ಅಧರ್ಮದ ಸಂಕೇತಗಳನ್ನು ನಿವಾರಿಸುವುದು – ಇದೇ ಅವನ ಜೀವಿತದ ಉದ್ದೇಶ. ಶ್ರೀಕೃಷ್ಣನದು ಬಹುಮುಖ ವ್ಯಕ್ತಿತ್ವ. ಅವನು ವಹಿಸಿದ ಪಾತ್ರಗಳೂ ಹಲವಾರು. ಮಹಾಭಾರತ ಕಾಲದಲ್ಲಿನ ಅತ್ಯಂತ ಪ್ರಭಾವಪೂರ್ಣ ವ್ಯಕ್ತಿ ಆತ. ಆದರೂ ಎಂದಿಗೂ ಅಧಿಕಾರಕ್ಕೆ ಆಸೆಪಟ್ಟವನಲ್ಲ, ಕೀರ್ತಿಯ ಹಿಂದೆ ಓಡಿದವನಲ್ಲ. ಅವನು ಗೈದ ಹಲವಾರು ರೀತಿಯ ಕಾರ್ಯಗಳಲ್ಲಿ ಓತಪ್ರೋತವಾಗಿದ್ದು 'ಧರ್ಮಸಂರಕ್ಷಣೆ' ಎಂಬ ಪ್ರಧಾನ ಅಂಶ. ಅವನು ವೈಯಕ್ತಿಕ ಧರ್ಮಕ್ಕೆ ಹೇಗೆ ಮಹತ್ವಕೊಟ್ಟನೋ, ಹಾಗೆಯೇ ಸಮಾಜದ ಉಳಿವು ಮತ್ತು ಏಳ್ಗೆಗೂ ಧರ್ಮದ ಆವಶ್ಯಕತೆಯನ್ನು ಎತ್ತಿ ಸಾರಿದನು.

ಶ್ರೀಕೃಷ್ಣನ ಜೀವಿತದ ಸಾರಸರ್ವಸ್ವವನ್ನು ಆತನ ಭಗವದ್ಗೀತೆಯ ಸಂದೇಶದಲ್ಲಿ ನೋಡುತ್ತೇವೆ. ಶ್ರೀಕೃಷ್ಣನ ವ್ಯಕ್ತಿತ್ವ ಮತ್ತು ನಡವಳಿಕೆಗಳ ತಾತ್ತ್ವಿಕ ರೂಪವೇ ಗೀತೆ. ನಿಷ್ಕಾಮ ಕರ್ಮ, ನಿರಾಸಕ್ತ ಭಾವ, ಯಜ್ಞಭಾವ, ಬುದ್ಧಿಯೋಗ, ಪ್ರೇಮಭಕ್ತಿ, ಧ್ಯಾನ, ದೈವೀಸಂಪತ್ತು ಮತ್ತು ಶರಣಾಗತಿ ಮುಂತಾದ ಆಧ್ಯಾತ್ಮಿಕ ಮೌಲ್ಯಗಳನ್ನು ಸಾಮರಸ್ಯಗೊಳಿಸಿ, ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳುವ ಮರ್ಮವನ್ನು ಅದು ಸಾರುತ್ತದೆ. ಇದನ್ನೇ ಶ್ರೀಕೃಷ್ಣನು ಸಾಧಿಸಿ ತೋರಿಸಿದ್ದು. ಶ್ರೀಕೃಷ್ಣ ಬಾಳನ್ನು ಸಮಗ್ರವಾಗಿ ನೋಡಿದನು. ಅಭ್ಯುದಯವನ್ನು (ಲೌಕಿಕ ಪ್ರಗತಿ) ಸಾಧಿಸುತ್ತಲೇ, ನಿಶ್ರೇಯಸಕ್ಕಾಗಿಯೂ (ಪಾರಮಾರ್ಥಿಕ ಧ್ಯೇಯ) ಪ್ರಯತ್ನಪಡುವ 'ಯೋಗ'ವನ್ನು ಬೋಧಿಸಿದನು. ಅವನ ಬೋಧನೆಯಲ್ಲಿ ವ್ಯಷ್ಟಿ ಮತ್ತು ಸಮಷ್ಟಿ ಹಿತಗಳು ಮಿಳಿತಗೊಂಡವು, ಭಕ್ತಿ, ಜ್ಞಾನ, ಕರ್ಮ ಮತ್ತು ಧ್ಯಾನಗಳು ಸಾಮರಸ್ಯಗೊಂಡವು. ಸಂನ್ಯಾಸ ಧರ್ಮ ಮತ್ತು ಗೃಹಸ್ಥ ಧರ್ಮಗಳೆರಡಕ್ಕೂ ಆಧಾರಭೂತವಾದ ತತ್ತ್ವ ಅವನ ಉಪದೇಶದಲ್ಲಿ ಸಿಕ್ಕುತ್ತದೆ. ಹೀಗೆ ಯಾವ ವ್ಯಕ್ತಿಯನ್ನೂ ಕೈಬಿಡದೆ, ಜಗತ್ತಿನ ಎಲ್ಲರನ್ನೂ ಆಧ್ಯಾತ್ಮಿಕ ಮಾರ್ಗದಲ್ಲಿ ಕೊಂಡೊಯ್ಯುವ ಉದಾರ ತತ್ತ್ವವನ್ನು ಶ್ರೀಕೃಷ್ಣನು ಉಪದೇಶಿಸುತ್ತಾನೆ. ವ್ಯಕ್ತಿಗತ ಧ್ಯೇಯಸಾಧನೆಯ ಜೊತೆಜೊತೆಗೇ ಸಮಾಜ ಮತ್ತು ದೇಶಹಿತವನ್ನು ಸಾಧಿಸುವ ಸರ್ವಾಂಗೀಣ, ಪರಿಪೂರ್ಣ ಮತ್ತು ಸಮಗ್ರ ಜೀವನದೃಷ್ಟಿಯನ್ನು ಅವನು ಪ್ರತಿಪಾದಿಸುತ್ತಾನೆ.

ಶ್ರೀಕೃಷ್ಣನ ವ್ಯಕ್ತಿತ್ವ ಮತ್ತು ಜೀವನದ ಈ ಎಲ್ಲ ಭವ್ಯ ದಿವ್ಯ ಅಂಶಗಳನ್ನು ಶ್ರೀರಾಮಕೃಷ್ಣರಲ್ಲೂ ಅತಿ ಸೌಮ್ಯ, ಆದರೆ ಅಷ್ಟೇ ಉದಾತ್ತರೀತಿಯಲ್ಲಿ ಕಾಣುತ್ತೇವೆ. ಶ್ರೀಕೃಷ್ಣನಂತೆ, ಅವರ ಜೀವಿತಕಾರ್ಯಗಳೆಲ್ಲವೂ ಸಮಷ್ಟಿಹಿತಪರವೇ ಆಗಿದ್ದವು. ಅದಕ್ಕಾಗಿ ಶ್ರೀಕೃಷ್ಣನು ತಳೆದ ಪ್ರಚಂಡ ಕರ್ಮಯೋಗದ ಮಾರ್ಗವನ್ನು ಅವರೂ ಅನುಸರಿಸಿದರು. ಅದಕ್ಕೆಂದೇ